ಒ.ಎಸ್. ನಂ.51/2023
ಪಿಡಬ್ಲು-1

ದಿನಾಂಕ 24.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟಿ ಸವಾಲುಃ ಪ್ರತಿವಾದಿ ಪರ ವಕೀಲರಿಂದ

ನಾನು ದಾವಾಸ್ತಿಯನ್ನು ಯಾರಿಂದ ಖರೀದಿಸಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿ ಯಾರಿಂದ ಪ್ಲಾಟನ್ನು ಖರೀದಿ ಮಾಡಿರುತ್ತಾಳೆಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತನ್ನು ಖರೀದಿಸುವಾಗ ಟೌನ ಪ್ಲಾನಿಂಗ, ನಕಾಶೆ, ಎನ್.ಎ. ಆಗಿರುವ ಬಗ್ಗೆ ನನಗೆ ಗೊತ್ತಿಲ್ಲ. ದಾವಾಸ್ತಿಯನ್ನು ಖರೀದಿ ಮಾಡುವಾಗ ಯಾರು ಮಾತುಕತೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾಸ್ತಿಯನ್ನು ಖೇರಿದಿ ಮಾಡುವಾಗ ನಾನು ಯಾವುದೆ ಕಾಗದ ಪತ್ರಗಳನ್ನು ನೋಡಿಲ್ಲ. ದಾವಾಸ್ತಿಯನ್ನು ಖರೀದಿ ಮಾಡುವಾಗ ಲೇ ಔಟನಲ್ಲಿ ಎಷ್ಟು ಪ್ಲಾಟುಗಳಿದ್ದವು ಎಂದರೆ ನನಗೆ ಗೊತ್ತಿಲ್ಲ. ಸದರಿ ಲೇಔಟನಲ್ಲಿ ಯಾರು ಯಾರು ಆಸ್ತಿಗಳನ್ನು ಖರೀದಿಸಿದ್ದಾರೆಂದು ನನಗೆ ಗೊತ್ತಿಲ್ಲ. ಸಾಮಾನ್ಯವಾಗ ಪ್ಲಾಟುಗಳನ್ನು ಮಾಡುವಾಗ ಅಳತೆ ಮಾಡಿಸಿ ಗೂಟಗಲ್ಲುಗಳನ್ನು ಹಾಕಿ ಪ್ಲಾಟುಗಳ ನಂಬರ ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ದಾವಾಸ್ತಿಯನ್ನು ಖರೀದಿ ಮಾಡುವಾಗ ಲೆಔಟನಲ್ಲಿ ಹೋಗಿ ಅಳತೆ ಮಾಡಿಸಿಲ್ಲ ಎಂದರೆ ಸರಿ. ಖರೀದಿ ಮಾಡಿದಾಗಿನಿಂದ ಇಲ್ಲಿಯವರೆಗೆ ನಾನು ಪ್ಲಾಟನ್ನು ಅಳತೆ ಮಾಡಿಸಿಲ್ಲ ಎಂದರೆ ಸರಿ.

ಈ ದಾವೆಯನ್ನು 3.5 ಪೂಟು ಜಾಗದ ಸಲುವಾಗಿ ಪ್ರತಿವಾದಿಯರ ಮೇಲೆ ದಾವೆ ಹಾಕಿರುತ್ತೇನೆ. ನಾನು ನನ್ನ ಹಾಗೂ ಪ್ರತಿವಾದಿಯ ಪ್ಲಾಟಗಳನ್ನು ಸಂಬಂಧಪಟ್ಟ ಇಲಾಖೆಯಿಂದ ಅಳತೆ ಮಾಡಿಸಿಲ್ಲ ಎಂದರೆ ಸರಿ. ನಾನು ಪ್ಲಾಟನ್ನು ಅಳತೆ ಮಾಡಿಸಿದ ಬಗ್ಗೆ ಯಾವುದೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ನನ್ನ ಪ್ಲಾಟಿನ ನಾಲ್ಕೂ ಚೆಕಬಂದಿಯ ಪ್ಲಾಟಗಳನ್ನು ಅಳತೆ ಮಾಡಿಸಿಲ್ಲ ಎಂದರೆ ಸರಿ. ಪ್ರತಿವಾದಿ ಮತ್ತು ಉಳಿದ ದಾವಾಸ್ತಿಯ ಸುತ್ತಮುತ್ತಲಿನ ಮಾಲಿಕರು ಪುರಸಭೆಯಿಂದ ಕಟ್ಟಡ ಪರವಾನಿಗೆ ಪಡೆದು ಕಟ್ಟಡ ನಿರ್ಮಾಣ ಮಾಡಿರುತ್ತಾತೆ ಎಂದರೆ ಸರಿ. ನಾನಾಗಲಿ ಪ್ರತಿವಾದಿಯಾಗಲಿ ಅಳತೆ ಮಾಡಲು ಯಾವುದೆ ಅರ್ಜಿ ಸಲ್ಲಿಸಿರುವುದಿಲ್ಲ.

ದಾವಾ ಆಸ್ತಿಯ ಸುತ್ತಮುತ್ತಲಿನ ಪ್ಲಾಟುಗಳನ್ನು ಅಳತೆ ಮಾಡಿಸದ ಹೊರತು ಒತ್ತುವರಿ ಆಗಿದೆ ಎಂದು ಹೇಳಲಾಗುವುದಿಲ್ಲ ಎಂದರೆ ಸರಿ. ನಾನು ದಾವಾಸ್ತಿಯನ್ನು ಅಳತೆ ಮಾಡಿಸದೆ, ನನ್ನ ಅಂದಾಜಿನ ಪ್ರಕಾರ 3.5 ಪೂಟು ಒತ್ತುವರಿ ಆಗಿರುತ್ತದೆ ಎಂದು ದಾವೆ

ಸಲ್ಲಿಸಿರುತ್ತೇನೆ ಎಂದರೆ ಸರಿ. ನನ್ನ ಪ್ಲಾಟು ಒತ್ತುವರಿಯಾದ ಬಗ್ಗೆ ಲೆ ಔಟ್ ಮಾಲಿಕರನ್ನು ವಿಚಾರಿಸಿಲ್ಲ. ಪ್ರತಿವಾದಿ ಯಾವ ದಿನ ಮತ್ತು ಯಾವ ಸಮಯದಲ್ಲಿ ಒತ್ತುವರಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಒಂದು ಮನೆ ಕಟ್ಟಬೇಕಾದರೆ ಒಂದು ವರ್ಷ ಬೇಕಾಗುತ್ತದೆ ಎಂದರೆ ಸರಿ ಆದರೆ ನಾನು ಮುಂಬೈನಲ್ಲಿ ವಾಸಿಸುತ್ತಿದ್ದು ನಾನು ವರ್ಷಕ್ಕೆ 1-2 ಸಾರಿ ಬರುತ್ತೇನೆ ಎಂದು ಹೇಳುತ್ತಾರೆ. ಪ್ರತಿವಾದಿಯರು ಈಗಾಗಲೇ ಮನೆ ಕಟ್ಟಿ ವಾಸಿಸುತ್ತಿದ್ದಾರೆ ಎಂದರೆ ಸರಿ. ಪ್ರತಿವಾದಿಯರು ಕಟ್ಟಡ ಪರವಾನಿಗೆ ಪಡೆದು ಸದರಿ ಕಟ್ಟಡ ಪರವಾನಿಗೆಯ ನಿಯಮಾನುಸಾರ ಮನೆ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯರ ಕಟ್ಟಡ ಪರವಾನಿಗೆ ಪತ್ರಕ್ಕೆ ಯಾವುದೆ ತಕರಾರು ಸಲ್ಲಿಸಿಲ್ಲ ಎಂದರೆ ಸರಿ.

ಈ ಮೊದಲು ಪ್ರತಿವಾದಿಯ ಮೇಲೆ ಅಸಲು ದಾವೆ ನಂ.76/2016 ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ದಾವೆಯನ್ನು ಒತ್ತುವರಿ ವಿಚಾರವಾಗಿ ಸಲ್ಲಿಸಿರುತ್ತೇನೆ. ಸದರಿ ದಾವೆ ನಾನು ಸರಿಯಾಗಿ ನಡೆಸದ ಕಾರಣ ವಜಾಗೊಂಡಿರುತ್ತದೆ ಎಂದರೆ ಸರಿ. ಸದರಿ ದಾವೆ ಪುನರ ಸ್ಥಾಪನೆ ಮಾಡಲು ಯಾವುದೆ ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿ. ಪ್ರತಿವಾದಿಯ ಮೇಲೆ ನಾನು ಸಿಸಿ ನಂ.340/2016 ರಲ್ಲಿ ಪ್ರಕರಣ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಪ್ರಕರಣವು ಸಹ ಖುಲಾಸೆಗೊಂಡಿರುತ್ತದೆ.

ಪ್ರತಿವಾದಿಯರು 3.5 ಪೂಟು ಜಾಗವನ್ನು ಒತ್ತುವರಿ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ದಾವೆ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ